# ಮೊದಲನೆಯ ನಾಗವರ್ಮನ 'ಕರ್ನಾಟಕ ಕಾದಂಬರಿ' ಕಥನಕ್ರಮ.

**ಡಾ. ತಿಮ್ಮಪ್ಪ ಎ. ಕೆ.**
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಶಿಕಾರಿಪುರ, ಶಿವಮೊಗ್ಗ.

**Article Link: https://aksharasurya.com/2023/09/thimmappa-a-k/**

## ABSTRACT:

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಾಹಿತ್ಯ ರಚನೆ ಮಾಡಿದ ಕವಿಗಳಲ್ಲಿ ಪ್ರಮುಖರಾದವರು ಮೊದಲನೆಯ ನಾಗವರ್ಮ. ಸಾಹಿತ್ಯ ಚರಿತ್ರೆಯ ಯಾವ ಕಾಲಘಟ್ಟದಲ್ಲಿಯೂ ಪ್ರಣಯ ಪ್ರಸಂಗಳಿಗೆ ಯಾವುದೇ ಕೊರತೆಯಿಲ್ಲ. ಕರ್ನಾಟಕ ಕಾದಂಬರಿಯಲ್ಲಿ ಬರುವ ಕಾದಂಬರಿ, ಚಂದ್ರಪೀಡ, ಮಹಾಶ್ವೇತೆ, ವೈಶಂಪಾಯನ, ಕಪಿಂಜಲ, ಪುಂಡರೀಕ ಇಂತಹ ಪ್ರಮುಖ ಪಾತ್ರಗಳನ್ನೊಳಗೊಂಡಿರುವ ಕೃತಿ ಇದಾಗಿದೆ. ಇದರ ಕಥಾಸಂವಿಧಾನ ಅತ್ಯಂತ ಜಟಿಲವು ದಿಗ್ಭ್ರಾಂತವು ಆಗಿದ್ದು, ಕಥೆಯೊಳಗೆ ಕಥೆ ಸೇರಿಕೊಂಡು ಹಲವಾರು ಒಳಪದರುಗಳು ನಿರ್ಮಿತವಾಗಿರುವುದರ ಜೊತೆಗೆ ಶಾಪ, ಪ್ರತಿಶಾಪ, ಪುನರ್‌ಜನ್ಮಗಳ ಗೊಂದಲಗಳಿವೆ. ಮೂರು ಜನ್ಮಗಳ ಕಥೆಯನ್ನು ಕವಿ ಒಂದು ಸಂಕೀರ್ಣ ವಿನ್ಯಾಸದಲ್ಲಿ ನಿರೂಪಿಸಿದ್ದಾರೆ. ಇದರಲ್ಲಿ ಸಂಕೀರ್ಣವಾದ ತಂತ್ರಗಳನ್ನು ಬಳಸಿಕೊಳ್ಳುತ್ತಾ ಹೋಗುತ್ತಾನೆ. ಇದರಲ್ಲಿನ ಪಾತ್ರಗಳೆಲ್ಲವು ಕಥೆಗಳನ್ನು ಹೇಳುತ್ತಾ ಹೋಗುತ್ತವೆ. ಗಿಳಿಕಥೆ, ಜಾಬಾಲಿಋಷಿ, ಮತ್ತೊಂದು ಕಡೆ ಮಹಾಶ್ವೇತೆ, ಇನ್ನೊಂದು ಕಡೆ ಕಪಿಂಜಲ ಕಥೆಗಳನ್ನು ಹೇಳುತ್ತಿರುತ್ತಾರೆ. ಇದೊಂದು ಕಾವ್ಯ ತಂತ್ರವನ್ನು ರೂಪಿಸಿದ ಬಗೆಯಾಗಿದೆ. ಹಿಮ್ಮುಖ ಚಲನೆಯಲ್ಲಿ ಬಂದು ಅವುಗಳ ನಡುವಿನ ಸಂಬಂಧವನ್ನು ಜ್ಞಾಪಿಸಿಕೊಳ್ಳುವ ಬಗೆಯೇ ಈ ಕಾವ್ಯದ ವಿಶೇಷವಾಗಿದೆ. ಓದುಗರಿಗೆ ಹೊಸ ಆಲೋಚನೆ ಮತ್ತು ಆನಂದವನ್ನು ಈ ಕೃತಿ ಕೊಡುತ್ತದೆ ಎಂಬ ಭರವಸೆಯ ಹಿನ್ನಲೆಯಲ್ಲಿ ಅವಲೋಕಿಸಲಾಗಿದೆ.

## KEYWORDS:

ಕಾದಂಬರಿ, ಚಂದ್ರಪೀಡ, ಮಹಾಶ್ವೇತೆ, ವೈಶಂಪಾಯನ, ಕಪಿಂಜಲ, ಪುಂಡರೀಕ, ಗಿಳಿ.

ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆಯನ್ನು ಗಮನಿಸಿದರೆ 10ನೆಯ ಶತಮಾನದಿಂದ 12ನೆಯ ಶತಮಾನದವರೆಗೆ ಸಾಹಿತ್ಯ ರಚನೆ ಮಾಡಿದ ಕವಿಗಳೆಲ್ಲರೂ ಕವಿತ್ವವನ್ನು ಪ್ರಜ್ಞಾಪೂರ್ವಕವಾಗಿ ತುಂಬಾ ಗಂಭೀರವಾಗಿ ಆಲೋಚನೆ ಮಾಡಿದವರಾಗಿದ್ದರು. ಪಂಪ ಕವಿ ತನ್ನ ಆದಿಪುರಾಣದಲ್ಲಿ ಹೇಳಿದಂತೆ "ಇದು ನಿಚ್ಚಂ ಪೊಸತು ಅರುಣವಂಬಲ್ ಅತೀ ಗಂಭೀರಂ ಕವಿತ್ವಂ" ಎಂಬ ಮಾತು ಸಾರ್ಥಕವಾದಂತಿದೆ. ಸಮುದ್ರ ಯಾವ ಕಾರಣಕ್ಕೋಸ್ಕರ ಸದಾ ಹೊಸದಾಗಿ ಗೋಚರಿಸುತ್ತದೆಂದರೆ ತಾನು ಬರಮಾಡಿಕೊಳ್ಳತಕ್ಕಂತಹ ಎಲ್ಲವನ್ನು ಕೂಡ ಒಳಗೊಂಡು ಅದು ಹೊಸದಾಗಿ ನಿತ್ಯ ಕಾಣಿಸಿಕೊಳ್ಳುತ್ತದೆ. ಹಾಗೆಯೇ ಕವಿಯಾದವನ ಮನಸ್ಸು ಗಂಭೀರವಾದದ್ದು, ವಿಸ್ತಾರವಾದದ್ದಾಗಿರುತ್ತದೆ. ಪ್ರಾಚೀನ ಕನ್ನಡ ಸಾಹಿತ್ಯದ ವಸ್ತು ಗಾಂಭೀರ್ಯವನ್ನು ಮತ್ತು ಭಾಷಾ ಪ್ರೌಢಿಮೆಯನ್ನು ಕುರಿತು ನಾವು ಬರೆಯುವಾಗ ಕಾಲಾಯಾಪನಾ ಓದಿಗೆ ಅದು ಅರ್ಥವಾಗುವುದಿಲ್ಲ. ಸಮಾಜದಲ್ಲಿರುವ ಮೂರು ಪ್ರಮುಖ ಸಂಗತಿಗಳಾದ ಧರ್ಮದ ವಿಚಾರ, ರಾಜಾಶ್ರಯದ ವಿಚಾರ ಹಾಗೂ ಸಂಸ್ಕೃತ ಭಾಷೆಯ ವಿಚಾರಗಳು ಈ ಮೂರು ಅಂಶಗಳು ಪ್ರಾಚೀನ ಕನ್ನಡ ಸಾಹಿತ್ಯವನ್ನು ಹೇಗೆ ಪ್ರೇರೆಪಿಸಿದವೊ ಹಾಗೆಯೇ ಎಲ್ಲೊ ಒಂದು ಕಡೆ ನಿರ್ಭಂದಿಸುತ್ತಿದ್ದವು. ಹೀಗಾಗಿ ಪ್ರಾಚೀನ ಕನ್ನಡ ಸಾಹಿತ್ಯದ ಸ್ವರೂಪವನ್ನು ನಿರ್ಣಯಿಸುವಂತ ಸಂದರ್ಭದಲ್ಲಿ ನಮಗೆ ಮಹತ್ವದ ಪಾತ್ರವನ್ನು ವಹಿಸಿದ್ದು ಸಂಸ್ಕೃತ ಸಾಹಿತ್ಯ ಮಾತ್ರ. ಹಳಗನ್ನಡ ಕಾವ್ಯಾಭಿವ್ಯಕ್ತಿಗೆ ವಿಶೇಷವಾದ ಶಕ್ತಿ ದೊರೆತದ್ದು ಸಂಸ್ಕೃತ ಸಾಹಿತ್ಯದಿಂದಲೇ ಎಂದು ಭಾವಿಸಬೇಕು.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಗಮನಿಸುತ್ತ ಹೋದರೆ ಅಲ್ಲಿ ಕೆಲವೊಂದು ಪ್ರೇಮಕಥೆಗಳನ್ನು ತಿಳಿಸುವ ಪ್ರಯತ್ನವನ್ನು ನಮ್ಮ ಕವಿಗಳು ತಮ್ಮ ಕಾವ್ಯದ ಮೂಲಕ ತಿಳಿಸುತ್ತಾ ಬಂದಿದ್ದಾರೆ. ಇವುಗಳನ್ನು ಗಮನಿಸುತ್ತಾ ಬಂದರೆ ಒಂದಷ್ಟು ಪ್ರಣಯ ಕಥೆಗಳನ್ನು ಆಧಾರವಾಗಿಟ್ಟುಕೊಂಡಿರುವುದನ್ನು ನಾವು ಗಮನಿಸಬಹುದು. ಲೌಕಿಕ ಕಾವ್ಯಗಳನ್ನಷ್ಟೇ ಅಲ್ಲದೆ ಅಲೌಕಿಕ ಕೃತಿಗಳಲ್ಲಿಯೂ ಅವಕಾಶ ಮತ್ತು ಸಮಯ ಸಿಕ್ಕಾಗಲೆಲ್ಲ ಒಂದಷ್ಟು ಪ್ರೇಮ ಕಥೆಗಳ ಜೊತೆಗೆ ನೀತಿ ನಿರೂಪಣೆಯನ್ನು ಮಾಡುತ್ತಾ ಬಂದಿದ್ದಾರೆ. ಕೆಲವೊಮ್ಮೆ ದೇವಾನು ದೇವತೆಗಳಲ್ಲೂ ಸಹ ಭಕ್ತಿ ಭಾವವನ್ನು ತಿಳಿಸುವ ಪ್ರಯತ್ನವಿದೆ. ಎಷ್ಟು ಗಂಭೀರವಾಗಿದ್ದರೂ ಪ್ರಣಯ ಪ್ರಸಂಗಗಳನ್ನು ತಂದಿದ್ದಾರೆ. ಉದಾಹರಣೆಗೆ ಗಿರಿಜಾ ಕಲ್ಯಾಣ ಕಾವ್ಯವನ್ನು ಓದಿದಾಗ ನಮಗೆ ಅರ್ಥವಾಗುತ್ತದೆ. ವಿಶೇಷವಾದ ರಸಬರಿತವಾದ ಸಾಹಿತ್ಯ ಕೃತಿಗಳನ್ನು ನೀಡಿ, ಸಾಹಿತ್ಯ ಚರಿತ್ರೆಯ ಯಾವ ಕಾಲಘಟ್ಟದಲ್ಲೂ ಪ್ರಣಯ ಪ್ರಸಂಗಗಳಿಗೆ ಯಾವುದೇ ಕೊರತೆಯಿಲ್ಲ. ಕಾದಂಬರಿ, ಚಂದ್ರಾಪೀಡ, ಮಹಾಶ್ವೇತೆ,

ವೈಶಂಪಾಯನ, ಕಪಿಂಜಲ, ಪುಂಡರೀಕ ಇಂತಹ ಪಾತ್ರಗಳನ್ನೊಳಗೊಂಡಿರುವ ಕರ್ನಾಟಕ ಕಾದಂಬರಿ ಕೃತಿ ನಮ್ಮ ಕನ್ನಡ ಸಾಹಿತ್ಯದಲ್ಲಿದೆ. ಕಾದಂಬರಿಯ ಕಥಾ ಸಂವಿಧಾನ ಅತ್ಯಂತ ಜಟಿಲವೂ ದಿಗ್ಭ್ರಾಮಕವೂ ಆದದ್ದು. ಕಥೆಯೊಳಗೆ ಕಥೆ ಸೇ–ರಿಕೊಂಡು ಹಲವಾರು ಒಳಪದರುಗಳು ನಿರ್ಮಿತವಾಗಿರುವುದರ ಜೊತೆಗೆ ಶಾಪ, ಪ್ರತಿಶಾಪ, ಪುನರ್ಜನ್ಮಗಳ ಗೊಂದಲ ಬೇರೆ ತಲೆಹಾಕಿ, ಒಂದು ಚಕ್ರವ್ಯೂಹವೇ ಏರ್ಪಟ್ಟಿದೆ. ಮೂರು ಜನ್ಮಗಳ ಕಥೆಯನ್ನು ಕವಿ ಒಂದು ಸಂಕೀರ್ಣ ವಿನ್ಯಾಸದಲ್ಲಿ ನಿರೂಪಿಸಿದ್ದಾನೆ. ಅದರ ವಿಚಿತ್ರವಾದ ತಿರುವುಗಳನ್ನೂ ಮಡಿಕೆಗಳನ್ನು ಮೊದಲಿಂದ ಕಡೆತನಕ ನೆನಪಿಟ್ಟು ಕೊಳ್ಳುವುದೇ ಒಂದು ಪ್ರಯಾಸದ ಸಾಧನೆಯಾಗುತ್ತದೆ.

ಬಾಣ ಭಟ್ಟ ಮತ್ತು ಭೂಷಣ ಭಟ್ಟರಿಂದ ಸಂಸ್ಕೃತದಲ್ಲಿ ನಿರ್ಮಿತವಾಗಿ 'ಜಗತ್ಕೌತುಕ'ವೆನಿಸಿದ ಕಾದಂಬರಿಯನ್ನು ತಾನು ಕನ್ನಡಕ್ಕೆ ಅನುವಾದಿಸುತ್ತಿರುವುದಾಗಿ ಹೇಳಿಕೊಂಡಿದ್ದಾನೆ.

**ಆ ಕೃತಿ ಮುನ್ನು ಚೆಲ್ವಿಂ**
**ಗಾಕರಮೆನಿಸಿರ್ದು ಮತ್ತೆ ಕನ್ನಡಿಸುತ್ತಿ**
**ನ್ನೀ ಕವಿತೆಯಂ ಪ್ರಗಲ್ಭತೆ**
**ಯಾ ಕಾದಂಬರಿಯ ಸೊಬಗದೇನಚ್ಚರಿಯೋ**

ಇಲ್ಲಿ ನಾಗವರ್ಮನು ಬಳಸಿರುವ 'ಕನ್ನಡಿಸು' ಎಂಬ ಪದ ಬಹಳ ಅರ್ಥವತ್ತಾಗಿದೆ. ಪ್ರಾಯಶಃ ಕನ್ನಡದಲ್ಲಿ ಅದನ್ನು ಮೊತ್ತಮೊದಲು ಬಳಸಿದವನು ಅವನೆ 'ಕನ್ನಡಿಸು' ಎಂದರೆ 'ಕನ್ನಡಕ್ಕೆ ಪರಿವರ್ತಿಸು' ಎಂದೂ ಪ್ರತಿಬಿಂಬಿಸು (to mirror) ಎಂದು ಅರ್ಥವಾಗುತ್ತದೆ. ಭಾಷಾಂತರದ ಆದರ್ಶ ಇಲ್ಲಿ ಚೆನ್ನಾಗಿ ಸೂಚಿತವಾಗಿದೆ.

ಒಂದನೆಯ ನಾಗವರ್ಮನು ಕ್ರಿ.ಶ. 990 ರಲ್ಲಿ ಜನಿಸಿದನು. ಈತನು ಕರ್ನಾಟಕ ಕಾದಂಬರಿ ಮತ್ತು ಛಂದೋಬುಧಿ ಎಂಬ ಗ್ರಂಥಗಳನ್ನು ರಚಿಸಿದ್ದಾನೆ. ಗುಣಾಢ್ಯನ ಪೈಶಾಚಿ ಭಾಷೆಯಲ್ಲಿನ ಬೃಹತಕ್ಕಥೆ, ಬಾಣನ ಸಂಸ್ಕೃತದಲ್ಲಿನ ಕಾದಂಬರಿಯನ್ನು ಆಧಾರವಾಗಿಟ್ಟುಕೊಂಡು ನಾಗವರ್ಮನು ಕನ್ನಡದಲ್ಲಿ ಕರ್ನಾಟಕ ಕಾದಂಬರಿಯನ್ನು ಚಂಪೂವಿನಲ್ಲಿ ರಚಿಸಿದ್ದಾನೆ. ಜೈನ ಸಾಹಿತ್ಯವು ಆರಂಭಗೊಂಡಿದ್ದೆ ಪ್ರಾಕೃತದಂತಹ ಜನಭಾಷೆಯ ಮೂಲಕ, ಸಂಸ್ಕೃತಕ್ಕೆ ತಿರುಗಿದ್ದರೂ, ಕನ್ನಡದಂತಹ ಜನಭಾಷೆಗಳ ಮೂಲಕ ಮತ್ತೆ ಮತ್ತೆ ಅದು ಜನಮುಖಿಯಾಯಿತು. ಜೈನ ಚಂಪೂಕವಿಗಳು ಹಳೆಯ ವಸ್ತುವಿಷಯಗಳನ್ನಿಟ್ಟುಕೊಂಡು ಕಾವ್ಯರಚನೆ ಮಾಡಿದರು. ಇವುಗಳಲ್ಲಿ ಹೊಸತನ ಮತ್ತು ಬದುಕಿನ ಅದೃಷ್ಠ ಶಕ್ತಿಗಳ ಬಗ್ಗೆ ಚಿಂತನೆ ನಡೆಸುತ್ತಿದ್ದರು.

ಕಾಲಾನಂತರದಲ್ಲಿ ಬ್ರಾಹ್ಮಣಕವಿಗಳು ತಮ್ಮ ವೈಧಿಕ ಮತವನ್ನು ಜನಸಾಮಾನ್ಯರಲ್ಲಿ ಪ್ರಚುರಗೊಳಿಸುವ ಉದ್ದೇಶವಿದ್ದಂತೆ ಕಂಡುಬರುವುದಿಲ್ಲ. ಕಾರಣ ವೈಧಿಕ ಸಂಸ್ಕೃತ ನಿಷ್ಠವಾದದ್ದು. ಜನಸಾಮಾನ್ಯರಿಂದ ದೂರವಾಗಿ ಅವರೆಲ್ಲರಿಗಿಂತ ತಾನು ಶ್ರೇಷ್ಠವೆಂದು ತೋರಿಕೆಯ ಉದ್ದೇಶವಿದ್ದಂತಿತ್ತು. ಇದರ ಜೊತೆಗೆ ಕನ್ನಡದ ವಾತಾವರಣ ನಾಡಿನಾದ್ಯಂತ ಹರಡಿಕೊಂಡಿತ್ತು. ಆದ್ದರಿಂದ ಬ್ರಾಹ್ಮಣ ಕವಿಗಳು ಕನ್ನಡದಲ್ಲಿಯೇ ಬರೆಯಲು ಅನಿವಾರ್ಯವಾಗಿ ತೊಡಗಿಕೊಂಡರು. ಧರ್ಮೇತರ ವಸ್ತುವಿನೊಡನೆ ನಮಗೆ ತಿಳಿದ ಕನ್ನಡದಲ್ಲಿಯೇ ಕಾವ್ಯರಚನೆ ಮಾಡಿದರು. ಅವರಲ್ಲಿ ಪ್ರಮುಖರೆಂದರೆ ಒಂದನೆಯ ನಾಗವರ್ಮ, ದುರ್ಗಸಿಂಹ, ರುದ್ರಭಟ್ಟ ಮತ್ತು ದೇವಕವಿ ಮೊದಲಾದವರಿದ್ದರು.

ಕರ್ನಾಟಕ ಕಾದಂಬರಿಯ ಮೊದಲ ಪದ್ಯದಲ್ಲಿಯೇ ಚಂದ್ರರಾಜನನ್ನು ಸ್ಮರಿಸಿದ್ದಾನೆ. ಈತನೇ ತನ್ನ ಆಶ್ರಯದಾತನಾಗಿದ್ದರಿಂದ ಚಂದ್ರಾಪೀಡನ ಜೊತೆಯಲ್ಲಿಯೇ ಕಾವ್ಯದಲ್ಲಿ ಸಮೀಕರಿಸಿದ್ದಾನೆ. ಇದೊಂದು ಸ್ವತಂತ್ರ ಕಾವ್ಯವಲ್ಲ, ಅದು ಬಾಣಭಟ್ಟನ ಸಂಸ್ಕೃತ ಗದ್ಯಕಾವ್ಯವಾದ ವಿವೇಚನಾಯುತವಾಗಿ ಸಂಗ್ರಹಗೊಂಡ ಚಂಪೂರೂಪದ ಅನುವಾದ ಕೃತಿಯಾಗಿದೆ. ಬಾಣನ ಕೃತಿಯಲ್ಲಿ ಪೂರ್ವಭಾಗ ಮತ್ತು ಉತ್ತರಭಾಗವೆಂಬ ಎರಡು ಪ್ರಕಾರಗಳಿವೆ. ಪೂರ್ವಭಾಗವನ್ನು ಬಾಣನಿಂದ ರಚನೆಯಾದರೆ, ಉತ್ತರ ಭಾಗವು ಆತನ ಮಗನಾದ ಭೂಷಣಭಟ್ಟನಿಂದ ಪೂರ್ಣಗೊಂಡಿದೆ. 'ಗದ್ಯಂ ಕವೀನಾಂ ನಿಕಷಂ ವದಂತಿ' ಗದ್ಯವು ಕವಿಯ ಯೋಗ್ಯತೆಯ ಒರೆಗಲ್ಲು ಎಂಬ ಹೆದ್ದಾರಿಯನ್ನು ನಿರ್ಮಿಸಿದಂತಿದೆ. ಬಾಣನ ಕಾದಂಬರಿಯ ಹಿನ್ನೆಲೆಯಲ್ಲಿ ನಾಗವರ್ಮನ ಒಟ್ಟು ಸಾದನೆ ಏನೆಂಬುದನ್ನು ಸಂಕ್ಷಿಪ್ತಗೊಳಿಸಬಹುದು. ಹತ್ತನೆಯ ಶತಮಾನ ಒಂದು ವೀರಯುಗ, ಕ್ಷಾತ್ರಯುಗವೆಂದು ಪ್ರಸಿದ್ಧಿಯಾಗಿದೆ. ಆಗಲೂ ತಮ್ಮ ಆಶ್ರಯದಾತರಾಜರನ್ನು ತಮ್ಮ ಕಾವ್ಯದ ಅಭೇದ ನಾಯಕರನನ್ನಾಗಿ ಕಾವ್ಯ ಬರೆಯುವ ಪರಂಪರೆ ಇತ್ತು. ಪಂಪನನ್ನು ಮೊದಲ್ಗೊಂಡು ಉಳಿದವರೆಲ್ಲರೂ ಒಂದು ಲೌಕಿಕ, ಮತ್ತೊಂದು ಅಲೌಕಿಕ ಕಾವ್ಯವನ್ನು ಬರೆಯುತ್ತಿದ್ದರು. ಆ ಸಂದರ್ಭದಲ್ಲಿ ಬಂದ ಮೊದಲನೆಯ ನಾಗವರ್ಮನು ರೂಪಿಸಿಕೊಂಡದ್ದು ಬೇರೆ ಮಾರ್ಗ. ಎಲ್ಲರೂ ಹೋಗುವ ದಾ–ರಿಯನ್ನು ಬಿಟ್ಟು ಬೇರೆ ದಾರಿಯಲ್ಲಿಯೇ ಹೊರಡುತ್ತಾನೆ. ಪ್ರೇಮ ಮತ್ತು ಶೃಂಗಾರ ಕಾವ್ಯವನ್ನು ಬರೆಯಲು ತೊಡುಗುತ್ತಾನೆ. ಇದು ನೇರವಾಗಿ ಅನುವಾದಗೊಂಡಿರುವ ಕಾವ್ಯವಲ್ಲ, ಬದಲಿಗೆ ಸ್ವಂತಿಕೆಯು ಕಾವ್ಯವಾಗಿರುವುದು ಈತನ ವಿಶೇಷ. ಬಾಣನು ಆ ಕಾಲದ ನಾಗರೀಕತೆ, ನಾಜೂಕುತನ, ಸಂಸ್ಕೃತಿಗಳನ್ನು ತನ್ನ ಕಾವ್ಯದಲ್ಲಿ ಹಿಡಿದಿದ್ದಾನೆ. ಹರ್ಷಚರಿತೆ ಮತ್ತು ಕಾದಂಬರಿ ಎಂಬೆರಡು ಕಾವ್ಯಗಳನ್ನು ಬರೆದರೂ ಹರ್ಷನ

ಕಥೆಯನ್ನು ಹೇಳುವುದರ ಜೊತೆಗೆ ತನ್ನ ಕಥೆಯನ್ನು ಹೇಳಿಕೊಳ್ಳುತ್ತಾನೆ. ಈತನ ಕಾದಂಬರಿಯನ್ನಾಧರಿಸಿ 'ಬಾಣಭಟ್ಟನ ಆತ್ಮಕಥಾ' ಎಂಬುದನ್ನು ಹಜಾರಿಪ್ರಸಾದ್ ದ್ವಿವೇದಿಯವರು ಹಿಂದಿಯಲ್ಲಿ ತಮ್ಮ ಕೃತಿಯನ್ನು ಪ್ರಕಟಿಸಿದ್ದಾರೆ. ಇದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದುಕೊಂಡಿದೆ. ನಾಗವರ್ಮನು ಕಾಲ್ಪನಿಕ ಕಥೆಯನ್ನು ಆಯ್ದುಕೊಂಡು, ಪೈಶಾಚಿ ಭಾಷೆಯಲ್ಲಿ ಗುಣಾಢ್ಯನ ಕಥೆಗಳನ್ನು ಆಧಾರವಾಗಿಟ್ಟುಕೊಂಡು ಕರ್ನಾಟಕ ಕಾದಂಬರಿ ಎಂಬ ಸ್ವತಂತ್ರ ಚಂಪೂ ಕಾವ್ಯವನ್ನು ರಚಿಸಿದ್ದಾರೆ.

ಇದರಲ್ಲಿ ಆಕಾಶ ಭೂಮಿಗೆ ರಸಸೇತುವೆಯನ್ನು ನಿರ್ಮಿಸಿದಂತಿರುವ ಈ ಕಥೆ ಗಂಡು–ಹೆಣ್ಣುಗಳ ದಿವ್ಯ ಪ್ರೇಮವನ್ನು ಮನೋಹರವಾಗಿ ಚಿತ್ರಿಸುತ್ತದೆ. ಸೊಗಸಾದ ಸ್ನೇಹ ಬಾಂದವ್ಯದ ಹಾಗೂ ಪ್ರೇಮ ಕಥೆಯಾಗಿರುವುದು. ಕಾವ್ಯದ ವಿಶೇಷ ಆರಂಭದಲ್ಲಿ ಬರಿಯ ಕಾಮವಾಗಿದ್ದು, ಅಗಲಿಕೆಯ ನೋವಿನಲ್ಲಿ ಬೆಂದ ಜನ್ಮ ಜನ್ಮಾಂತರಗಳನ್ನು ದಾಟಿ ಬರುವಾಗ ತನ್ನ ಮೂಲದ ಆಶಯವನ್ನು ಕಳೆದುಕೊಂಡು ಅಮರವಾದ ಪ್ರೇಮವಾಗಿ ಪರಿವರ್ತನೆಗೊಂಡಿರುತ್ತದೆ. ಮೂರು ಮೂರು ಜನ್ಮಗಳಷ್ಟು ದೀರ್ಘಕಾಲ ತಮ್ಮ ಪ್ರಿಯತಮರಿಗಾಗಿ ಕಾದು ಕುಳಿತಿರುವ ಹೆಣ್ಣುಮಕ್ಕಳು ತಮ್ಮ ನಿಷ್ಠೆಯಿಂದ ಇಷ್ಟಸಿದ್ಧಿಯನ್ನು ಸಾಧಿಸುವ ಕಥೆ ಕರ್ನಾಟಕ ಕಾದಂಬರಿ ಕಾವ್ಯದ ವಸ್ತು. ಮಾನವನ ಮನದ ಹಂಬಲದ ಒಂದು ಹೊಂಗನಸಿನಂತೆ ಮೋಹದ ಒಂದು ಐಹಿಂದ್ರ ಜಾಲಿಕೆಯ ಸೃಷ್ಟಿಯಂತೆ ರಚಿತವಾಗಿರುವ ಇದು ಕನ್ನಡದ ಮೊಟ್ಟ ಮೊದಲ ಶೃಂಗಾರ ರಸ ಪ್ರಧಾನ ಕಾವ್ಯವಾಗಿದೆ.

ಕರ್ನಾಟಕ ಕಾದಂಬರಿ ಕೃತಿಯಲ್ಲಿ ತುಂಬಾ ಸಂಕೀರ್ಣವಾದ ತಂತ್ರಗಳನ್ನು ಬಳಸಿಕೊಳ್ಳುತ್ತಾ ಹೋಗುತ್ತಾನೆ. ಆತನ ಕಥೆಯ ನಿರೂಪಣಾ ಶೈಲಿ ಹೇಗಿದೆ ಎಂದರೆ ನಾಗವರ್ಮನು ಕಥೆಯನ್ನು ಬಹಳ ಕಡಿಮೆ ಹೇಳುತ್ತಾನೆ. ಇದರಲ್ಲಿ ಬರುವ ಪಾತ್ರಗಳ ಬಾಯಿಂದ ಕಥೆಗಳನ್ನು ಹೇಳಿಸುತ್ತಾ ಹೋಗುತ್ತಾನೆ. ಗಿಳಿಕಥೆ, ಜಾಬಾಲಿ ಋಷಿ, ಮತ್ತೊಂದು ಕಡೆ ಮಹಾಶ್ವೇತೆ, ಇನ್ನೊಂದು ಕಡೆ ಕಪಿಂಜಲ ಕಥೆಗಳನ್ನು ಹೇಳುತ್ತಿರುತ್ತಾರೆ. ಇದು ನಾಗವರ್ಮನ ಕಾವ್ಯ ತಂತ್ರವೂ ಕೂಡವಾಗಿದೆ. ಈ ಕೃತಿಯನ್ನು ಓದುತ್ತಾ ಹೋದರೆ ಒಂದು ಓದಿಗೆ ಅದು ಅರ್ಥವಾಗುವುದಿಲ್ಲ. ಹಿಮ್ಮುಖ ಚಲನೆಯಲ್ಲಿ ಬಂದು ಅವುಗಳ ನಡುವಿನ ಸಂಬಂಧವನ್ನು ಜ್ಞಾಪಿಸಿಕೊಂಡು ಹೋಗುವ ಅನಿವಾರ್ಯತೆಯಂತೆ ಇದೆ. ಆದ್ದರಿಂದಲೇ ಈ ಕೃತಿಯಲ್ಲಿ ಯಾವುದೂ ಕಾಲಾನುಕ್ರಮದಲ್ಲಿ ನಡೆಯುವುದಿಲ್ಲ. ಒಂದು ಓದಿಗೆ ಸಿಗುವ ಹಾಗೆ ಸರಳವಾಗಿ ಸ್ಥೂಲ ಪರಿಚಯನ್ನು ಮಾಡುವ ಪ್ರಯತ್ನವನ್ನು ಈ ಲೇಖನದ ಮೂಲಕ ತಿಳಿಸುವ ಪ್ರಯತ್ನ ಮಾಡಿದ್ದೇನೆ.

ದೇವಲೋಕದಿಂದ ಹಿಡಿದು ಭೂಲೋಕ, ಪ್ರಾಣಿಗಳು, ಗಂಧರ್ವರು, ಕಿನ್ನರರು ಮುಂತಾದವರೆಲ್ಲರೂ ಸಹ ಈ ಕೃತಿಯಲ್ಲಿ ಬರುತ್ತಾರೆ. ಒಂದು ಗಿಳಿ ರಾಜನ ಜೊತೆ ಮಾತನಾಡುತ್ತದೆ. ಆತ ಶೂದ್ರಕರಾಜ ಅದು ವೈಶಂಪಾಯನ ಗಿಳಿ ಅವರಿಬ್ಬರ ಸಂಭಾಷಣೆಯಲ್ಲಿ ಏನೋ ಒಂದು ವಿಶೇಷತೆ ಇರುವಂತೆ ಭಾಸವಾಗುತ್ತದೆ. ಗಿಳಿಯನ್ನು ಕುರಿತು ಪೂರ್ವವೃತ್ತಾಂತವನ್ನು ಹೇಳು ಎಂದು ಶೂದ್ರಕ ರಾಜನು ಕೇಳುತ್ತಾನೆ. ಗಿಳಿ ಮಾತಾಡುವುದೇ ಕರ್ನಾಟಕ ಕಾದಂಬ–ರಿಯ ವಿಶೇಷತೆಯಾಗಿದೆ. ತನ್ನ ಕಥೆ ತುಂಬಾ ದೀರ್ಘವಾಗಿದ್ದರೂ ಸಹ ರಾಜನ ಖುಷಿಗಾಗಿ ಕಥೆಯನ್ನು ಹೇಳುತ್ತೇನೆಂದು ಗಿಳಿ ಕಥೆಯನ್ನು ಆರಂಭಿಸುತ್ತದೆ. ವಿಂಧ್ಯಾಟವಿಯಲ್ಲಿನ ದಂಡಕಾರಣ್ಯದಲ್ಲಿ ಒಂದು ಅಗಸ್ತ್ಯಾಶ್ರಮವಿದೆ ಅದರ ಸಮೀಪದಲ್ಲಿ ಪಂಪಾಸರೋವರವಿದೆ. ಅದರ ದಡದಲ್ಲಿ ದೊಡ್ಡದೊಂದು ಬೂರುಗದ ಮರವು ರೆಂಬೆಕೊಂಬೆಗಳನ್ನು ವಿಸ್ತಾರವಾಗಿ ಬೆಳೆಸಿಕೊಂಡಿತ್ತು ಅದನ್ನೇ ನಂಬಿ ಸಾವಿರಾರು ಗಿಳಿಗಳು ವಾಸಸ್ಥಾನವಾಗಿ ಮಾಡಿಕೊಂಡಿದ್ದವು. ಶಾಲ್ಮಲೀ ವೃಕ್ಷದಲ್ಲಿ ಮನೆ ಮಾಡಿಕೊಂಡಿರುವ ಗಿಳಿಗಳ ವರ್ಣನೆಯನ್ನು ಕವಿ ಹೀಗೆ ವರ್ಣಿಸಿದ್ದಾನೆ.

**ತಳರ್ಗಳಿಮಿರಂಬಿನಲ್ಲಿ ತುದಿಗೋಡ ಮೊದಲ್ಗಳ ತಾಣದಲ್ಲಿ ನಾ**
**ರ್ಗಳ ಪೊರೆಯಲ್ಲಿ ಪೋಳ್ಗಳೆಡೆಯಲ್ಲಿ ಕವಲ್ಗಣೆಯಲ್ಲಿ ಸುತ್ತಲುಂ**
**ಗಿಳಿಗಳ ಪಿಂಡುಗಳ್ ನೆರೆದು ಕೂಡಿಯುಮಲ್ಲಿ ಸಹಸ್ರಮುಂ ನಿರಾ**
**ಕುಳಮನು ರಾಗದಿಂ ಪಲವು ದೇಶದೊಳಿರ್ಪುವು ಬಂದು ಭೂಪತಿ!**

ಈ ವೃಕ್ಷದಲ್ಲಿ ಎಲೆಗಳು ಕೆಲವೆ ಇದ್ದರೂ, ಗಿಳಿವಿಂಡಿನ ಹಸುರಿನಿಂದಾಗಿ ಅದು ಎಲೆಗಳ ದಟ್ಟಣೆಯಿಂದ ಕತ್ತಲಿಸಿದಂತೆ ತೋರುತ್ತದೆ. ಅಲ್ಲಿಂದ ಪ್ರತಿನಿತ್ಯವು ಗಿಳಿಗಳು ಯಮುನಾ ಪ್ರವಾಹದಂತೆ, ಸುರಗಜ ಕಿತ್ತೆಸೆದ ಆಕಾಶ ಗಂಗಾ ಕಮಲಗಳಂತೆ, ಇಂದ್ರಾಚಾಪಗಳಂತೆ ಕುಟುಕಿಗಾಗಿ ಹಾರಿ ಹೋಗುತ್ತವೆ. ಒಂದು ಪೊಟರಿನಲ್ಲಿ ತನ್ನ ತಂದೆಯ ರೆಕ್ಕೆಯಲ್ಲಿ ಅವಿತುಕೊಂಡಿದ್ದೆ ತಾಯಿ ಪ್ರಸವ ಕಾಲದಲ್ಲೇ ತೀರಿಕೊಂಡಿದ್ದಳು. ನನ್ನ ರೆಕ್ಕೆಗಳು ಬಲಿತಿರಲಿಲ್ಲ, ಮಮತೆಯಿಂದ ತಂದೆಯೇ ಸಲಹುತ್ತಿದನು. ಒಂದು ದಿನ ಬೇಡರ ಗುಂಪೊಂದು ಮಹಾಶಬ್ಧದಿಂದ ಆ ಪ್ರದೇಶಕ್ಕೆ ಪ್ರವೇಶ ಮಾಡುತ್ತದೆ. ಅವರಲ್ಲೊಬ್ಬ ತೀರ ಮುದಿಯಾಗಿದ್ದ ಬೇಡನಿಗೆ ಏನೂ ಸಿಗದೆ ಹೋಗಿತ್ತು. ಹೀಗಾಗಿ ಅಲ್ಲಿಯೇ ಇದ್ದ ಮರವನ್ನು ನಿಧಾನವಾಗಿ ಹತ್ತಿ ಪೊಟರೆಗಳಲ್ಲಿ ಎಲೆಗಳ ಕಾಯಿಗಳ ನಡುವೆ ಹುದುಗಿದ್ದ ಗಿಳಿಗಳನ್ನು ಹೊರತೆಗೆದು ಅವುಗಳ ಕತ್ತು ಹಿಚುಕಿ ಕೆಳಕ್ಕೆ ಬೀಸಾಡಿದ್ದನು. ಕೆಳಗೆ ಬಿದ್ದ ಗಿಳಿಗಳೆಲ್ಲವನ್ನು ಬಾಚಿಕೊಂಡು ಚೀಲದಲ್ಲಿ ತುಂಬಿಕೊಂಡು ಹೋಗುತ್ತಾನೆ. ನಾನು ತನ್ನ ತಂದೆಯ ರೆಕ್ಕೆಗಳಲ್ಲಿ ಮರೆಯಾಗಿ ಹುದುಗಿದ್ದ ಕಾರಣ ಮುದಿಬೇಡನಿಗೆ ತನ್ನ ಇರುವು

ತಿಳಿಯಲಿಲ್ಲ. ತಂದೆಯ ದೇಹದೊಡನೆ ತನ್ನನ್ನು ಕೆಳಕ್ಕೆ ಎಸೆದಾಗ ಬೀಳುವ ರಭಸಕ್ಕೆ ತಾನು ತಂದೆಯಿಂದ ಬೇರ್ಪಟ್ಟು ದೂರದಲ್ಲಿ ಬಿದ್ದಿದ್ದೆ. ತೆವಳಿ ತೆವಳಿ ತಾನು ಮತ್ತಷ್ಟು ದೂರ ಹೋಗಿ ಬೇಡನಿಂದ ಪಾರಾಗಿ ಬಾಯಾರಿಕೆಯಿಂದ ಒದ್ದಾಡುತ್ತಿದೆ. ಮದ್ಯಾಹ್ನದ ಸಮಯಕ್ಕೆ ಒಬ್ಬ ಮುನಿಕುಮಾರನಾದ ಹಾರೀತ ತನ್ನನ್ನೂ ಕಂಡು ಕರುಣೆಯಿಂದ ಕರೆದೊಯ್ದು ಮೈತೊಳೆದು ನೀರು ಕುಡಿಸಿದಾಗ ತನಗೆ ಹೊಸ ಚೈತನ್ಯ ಉಂಟಾಯಿತು. ತದನಂತರ ತನ್ನನ್ನು ಜಾಬಾಲಿ ಇದ್ದ ಆಶ್ರಮಕ್ಕೆ ಕರೆದೊಯುತ್ತಾನೆ. ತನ್ನನ್ನು ನೋಡಿದ ಕ್ಷಣವೇ ಜಾಬಾಲಿಯ ಗಂಭೀರವಾದ ಧ್ವನಿಯಿಂದ ಇವನು ಹಿಂದಿನ ಪಾಪ ಫಲವನ್ನು ಅನುಭವಿಸುತ್ತಿದ್ದಾನೆ. ಮೋಹಕ್ಕೆ ಸಿಲುಕಿ ಈ ಕೆಳಜಾತಿಯಲ್ಲಿ ಹುಟ್ಟಿದ್ದಾನೆಂದು ಹೇಳಿದಾಗ ಅಲ್ಲಿದ್ದವರೆಲ್ಲ ಗಿಳಿಯ ಕತೆ ಏನು ಎಂದು ಕುತೂಹಲದಿಂದ ಕೇಳುತ್ತಿದ್ದರು.

**ಗಿಳಿ ಹೇಳಿದ ಕಥೆ:** ಒಮ್ಮೆ ಶ್ವೇತಕೇತು ಮತ್ತು ಲಕ್ಷ್ಮೀ ಎಂಬ ದಂಪತಿಯ ಮಗನಾಗಿ ಪುಂಡರೀಕನು ಜನಿಸುತ್ತಾನೆ. ಈತನ ಗೆಳೆಯನೇ ಕಪಿಂಜಲ. ಇವ–ರಿಬ್ಬರೂ ಒಮ್ಮೆ ವನವಿಹಾರಕ್ಕೆ ಹೊರಡುತ್ತಾರೆ. ಅಲ್ಲಿ ಪುಂಡರೀಕನು ಮಹಾಶ್ವೇತೆ ಎಂಬ ಸುಂದರಿಯಾದ ಹೆಣ್ಣನ್ನು ನೋಡುತ್ತಾನೆ. ಅವಳೊಬ್ಬ ಗಂಧರ್ವ ಕುಮಾ–ರಿಯಾಗಿರುತ್ತಾಳೆ. ಅವಳನ್ನು ನೋಡಿದ ತಕ್ಷಣವೇ ಮೋಹಿತನಾಗುತ್ತಾನೆ. ಜೊತೆಗೆ ಅವಳು ಸಹ ಪುಂಡರೀಕನಲ್ಲಿ ಮೋಹಿತಳಾಗುತ್ತಾಳೆ. ಇವರಿಬ್ಬರ ಬೇಟಿ ಹೇಗಿದೆ ಎಂದರೆ Love at first sight ಇದ್ದ ಹಾಗೆ ಇರುತ್ತದೆ. ಮೊದಲ ನೋಟದಲ್ಲಿಯೇ ಅವರಿಬ್ಬರೂ ಮೋಹಿತಗೊಂಡಿದ್ದಾರೆ. ಪುಂಡರೀಕನು ತನ್ನ ವಾಸ ಸ್ಥಾನಕ್ಕೆ ಹಿಂದಿರುಗುತ್ತಾನೆ. ಮಹಾಶ್ವೇತೆಯೂ ಕೂಡ ಹೊರಟು ಹೋಗುತ್ತಾಳೆ. ಆದರೆ ಪುಂಡರೀಕನಿಗೆ ಮಹಾಶ್ವೇತೆಯನ್ನು ನೋಡಿದ ತಕ್ಷಣವೇ ಆಕೆಯಲ್ಲಿಯೇ ತನ್ನದೆಲ್ಲವನ್ನೂ ಬಿಟ್ಟು ಬಂದಿದ್ದೇನೆಂದು ಚಡಪಡಿಸುತ್ತಾನೆ. ಅವನಿಗೆ ಯಾವ ಕೆಲಸದಲ್ಲೂ ಕೂಡ ಆಸಕ್ತಿ ಇರುವುದಿಲ್ಲ. ತನ್ನ ಗೆಳೆಯನಲ್ಲಿ ತನ್ನ ಮನಸ್ಸಿನ ತಳಮಳದ ಭಾವನೆಗಳನ್ನು ಹೇಳಿಕೊಳ್ಳುತ್ತಾನೆ. ಕಪಿಂಜಲನು ನೀನೊಬ್ಬ ಮುನಿಕುಮಾರ ಕಾಮದೇವನು ನಿನಗೇನೋ ಮೋಸಮಾಡಿದ್ದಾನೆ. ನಿನ್ನ ಇಂದ್ರಿಯಗಳನ್ನು ನಿಗ್ರಹಿಸಿಕೊಳ್ಳಬೇಕೆಂದು ಆತನಿಗೆ ಹೇಳುತ್ತಾನೆ. ಇದಕ್ಕೆ ಪ್ರತ್ಯುತ್ತರವಾಗಿ ನಾನು ಮಹಾಶ್ವೇತೆಯನ್ನು ಭೇಟಿಯಾಗಬೇಕೆಂದು ಹಠ ಹಿಡಿಯುತ್ತಾನೆ. ಇದಕ್ಕೆ ಕಪಿಂಜಲನು ಮಹಾಶ್ವೇತೆಯನ್ನು ಭೇಟಿಯಾಗಲು ತೆರಳುತ್ತಾನೆ. ಅಲ್ಲಿ ಮಹಾಶ್ವೇತೆಯು ಇದೇ ಸ್ಥಿತಿಯಲ್ಲಿ ಪರಿತಪಿಸುತ್ತಿರುತ್ತಾಳೆ. ಇತ್ತಕಡೆ ಪುಂಡರೀಕನು ಭಾವೋದ್ವೇಗಕ್ಕೆ ಒಳಗಾಗಿದ್ದಾನೆ. ಮಹಾಶ್ವೇತೆಗಾಗಿ ಮತ್ತೆ ಮತ್ತೆ ಹಂಬಲಿಸುತ್ತಿರುತ್ತಾನೆ. ಇದೇ ಸಂದರ್ಭದಲ್ಲಿ ಬೆಳದಿಂಗಳನ್ನು ಸೂಸುವ ಚಂದ್ರ, ಆತನ ದೃಷ್ಠಿಗೆ ಬೀಳುತ್ತಾನೆ.

ಸಹಜವಾಗಿಯೇ ಪ್ರಕೃತಿಯಲ್ಲಿ ಬೆಳದಿಂಗಳಿಗೆ ಕಾಮೋದ್ವೇಗಕ್ಕೆ ಒಳಗಾಗುವುದು ಪ್ರಕೃತಿಯ ನಿಯಮವಾಗಿರುವುದರಿಂದ ಕಾಕಾತಾಳಿಯೆಂಬಂತೆ ಅವನಿಗಾಗಿರುವ ಮನಸ್ಸಿನ ಚಂಚಲತೆಗೆ ಚಂದ್ರನೇ ಕಾರಣವೆಂದು ಪುಂಡರೀಕನು ಭಾವಿಸುತ್ತಾನೆ. ಅದಕ್ಕಾಗಿಯೇ ಚಂದ್ರನಿಗೆ ನೀನು ನನ್ನ ಹಾಗೆ ಮೂರು ಮಾನವ ಜನ್ಮಗಳನ್ನೆತ್ತಿ ಇಲ್ಲಿರುವ ಕಷ್ಟನಷ್ಟಗಳನ್ನು ಅನುಭವಿಸಬೇಕೆಂದು ಶಪಿಸುತ್ತಾನೆ.

ಚಂದ್ರಾಪೀಡನು ಕುದುರೆಯ ಮುಖವಿರುವಂತಹ ವಿಲಕ್ಷಣವಾದ ಕಿನ್ನರ ಮಿಥುನಗಳನ್ನು ಕಾಣುತ್ತಾನೆ. ಅವುಗಳನ್ನು ಹಿಡಿಯುವುದಕ್ಕೆ ಹೊರಟರು ಅವುಗಳು ಸಿಕ್ಕಂತೆ ಕಂಡು ಕೈಲಾಸ ಪರ್ವತವನ್ನೇರಿ ಕಣ್ಮರೆಯಾಗುತ್ತವೆ. ಇವರೆಲ್ಲರನ್ನೂ ಬಿಟ್ಟು ಪ್ರತ್ಯೇಕವಾಗಿ ಇಂದ್ರಾಯುದ ಕುದುರೆಯ ಜೊತೆಗೆ ಹೋಗುತ್ತಾನೆ. ಅಲ್ಲೊಂದು ಅಚ್ಛೋದ ಸರೋವರವು ಗೋಚರಿಸುತ್ತದೆ. ಅದರ ಸೌಂದರ್ಯ, ಪ್ರಶಾಂತವಾದ ವಾತವರಣ ಹಾಗೂ ಭಕ್ತಿ ಭಾವಗಳನ್ನು ಹುಟ್ಟಿಸುತ್ತದೆ. ಅದರ ಅನತಿ ದೂರದಲ್ಲಿ ಒಂದು ಹೆಣ್ಣು ಏಕಚಿತ್ತದಿಂದ ತಪಸ್ಸನ್ನಾಚರಿಸುತ್ತಿರುತ್ತಾಳೆ. ಅವಳು ಯಾರಿರಬಹುದೆಂದು ಕುತೂಹಲದಿಂದ ನೋಡುತ್ತಾನೆ. ಅವಳಲ್ಲಿರುವ ಸೌಂದರ್ಯವನ್ನು ಕಂಡು ನಯ-ವಿನಯಗಳಿಂದ ವಿಚಾರಿಸುತ್ತಾನೆ. ಅವಳು ಆತನನ್ನು ಆತಿಥ್ಯ ಮಾಡುತ್ತಾಳೆ. ಯಾಕೆ ನೀನು ಇಂತಹ ತಪಸ್ಸನ್ನು ಆಚರಿಸುತ್ತೀಯ ಎಂದು ಪ್ರಶ್ನಿಸುತ್ತಾನೆ. ಆಗವಳು ತನ್ನ ಹಿಂದಿನ ಜನ್ಮದ ನೆನಪುಗಳನ್ನೆಲ್ಲ ನೆನೆದು ನನ್ನ ಪ್ರಿಯತಮ ಮತ್ತೆ ಸಿಗುತ್ತಾನೆಂಬ ಅಶೀರಿರವಾಣಿಯ ನಂಬಿಕೆಯಲ್ಲಿಯೇ ಕಾಯುತ್ತಿದ್ದೇನೆಂದು ತಿಳಿಸುತ್ತಾಳೆ. ಆ ಪ್ರಿಯತಮ ಬೇರ್‍ಯಾರು ಅಲ್ಲ ಪುಂಡ-ರೀಕನೇ ಎಂದು ತಿಳಿಸುತ್ತಾಳೆ. ಆಗ ಚಂದ್ರಾಪೀಡನಿಗೆ ಗೊತ್ತಾಗುವುದಿಲ್ಲ ಆತನಿಗೆ ಶಾಪಕೊಟ್ಟಿರುವನು ನಾನೆ ಎಂಬುದು ಅವಳ ಕಷ್ಟಕ್ಕೆ ಮರುಗುತ್ತಾನೆ. ಆಗ ಮಹಾಶ್ವೇತೆಯು ಚಂದ್ರಾಪೀಡನನ್ನು ಕರೆದುಕೊಂಡು ಹೇಮಕೂಟಕ್ಕೆ ಹೋಗುತ್ತಾಳೆ. ಅಲ್ಲಿ ಕಾದಂಬರಿ ಕನ್ಯಾವ್ರತವನ್ನು ಆಚರಿಸುತ್ತಿರುತ್ತಾಳೆ. ಚಂದ್ರಾಪೀಡನನ್ನು ಕಂಡ ತಕ್ಷಣವೇ ಕನ್ಯಾವ್ರತವನ್ನು ಕೈಬಿಡುತ್ತಾಳೆ. ಇಲ್ಲಿ ಮಹಾಶ್ವೇತೆಯ ಉದ್ದೇಶವೂ ಕೂಡ ಅದೇ ಆಗಿರುತ್ತದೆ. ಮತ್ತೊಮ್ಮೆ Lovt at first sight ಎಂಬಂತೆ ಚಂದ್ರಾಪೀಡ ಮತ್ತು ಕಾದಂಬರಿಯ ನಡುವೆ ಪ್ರೇಮಾಂಕುರವಾಗುತ್ತದೆ. ಈಗ ಚಂದ್ರಾಪೀಡನಿಗೆ ಉಜ್ಜಯಿನಿಯಿಂದ ತುರ್ತುಕರೆ ಬಂದುಬಿಡುತ್ತದೆ ವಾಪಾಸ್ಸಾಗುತ್ತಾನೆ. ಕಾದಂಬ-ರಿಗೆ ಮತ್ತೆ ಬೇಸರಗೊಂಡು ಮತ್ತೆ ವಾಪಸ್ಸು ಬರುತ್ತಾನೆಂಬ ನಂಬಿಕೆಯಿಂದ ಬೀಳ್ಕೊಡುತ್ತಾಳೆ. ಇಲ್ಲಿನ ವಿಶೇಷವೆಂದರೆ ಚಂದ್ರಾಪೀಡ ಹೋಗುವ ಹೊತ್ತಿಗೆ ಆಪ್ತಸಹಾಯಕಿಯಾಗಿ ಬಂದ ಪತ್ರಲೇಖೆಯನ್ನು ಕಾದಂಬರಿಯ ಜೊತೆಗೆ ಬಿಟ್ಟು ಹೋಗುತ್ತಾನೆ. ಈಕೆ ಹಿಂದಿನ ಜನ್ಮದಲ್ಲಿ ಚಂದ್ರನ ಮಡದಿಯಾದ ರೋಹಿಣಿ. ಈ

ಕಾವ್ಯದಲ್ಲಿ ತನ್ನ ಗಂಡನಿಗೆ ಇನ್ನೊಂದು ಹೆಣ್ಣನ್ನು ನೋಡುವ, ಅದಕ್ಕೆ ಪ್ರತಿಯಾಗಿ ಚಂದ್ರನು ಕೋಪಗೊಂಡು ನನ್ನ ಪಾಡಿಗೆ ನಾನಿದ್ದರೆ ನೀನು ನನಗೆ ಶಾಪವನ್ನು ಕೊಡುತ್ತೀಯ ಎಂದು ಚಂದ್ರನು ಸಹ ಪ್ರತಿ ಶಾಪವನ್ನು ಕೊಡುತ್ತಾನೆ. ನೀನು ಸಹ ಮೂರು ಮೂರು ಮಾನವ ಜನ್ಮಗಳನ್ನು ಎತ್ತಿ ವಿರಹವೇಧನೆಯಂತಾಗಲಿ ಎಂದು ಶಪಿಸುತ್ತಾನೆ. ಪುಂಡರೀಕನ ದೇಹಾಂತವಾದಾಗ ಚಂದ್ರನು ಚಂದ್ರಲೋಕಕ್ಕೆ ತೆಗೆದುಕೊಂಡು ಹೋಗಿ ಜೋಪಾನವಾಗಿಡುತ್ತಾನೆ. ಚಂದ್ರನು ಒಬ್ಬ ವಿಜ್ಞಾನಿಯಾಗಿದ್ದರಿಂದ ದೇಹವನ್ನು ಸಂಸ್ಕರಿಸಿಟ್ಟಿರುತ್ತಾನೆ. ಅದಕ್ಕೆ ಚಂದ್ರನು ನೀನೇನು ಯೋಚನೆ ಮಾಡಬೇಡ ನಮ್ಮ ಶಾಪ ವಿಮೋಚನೆಯಾದಾಗ ನಿನ್ನ ಗೆಳೆಯನನ್ನು ವಾಪಾಸು ಕಳಿಸುತ್ತೇನೆಂದು ಕಪಿಂಜಲನಿಗೆ ಹೇಳಿಕಳಿಸುತ್ತಾನೆ. ವಾಪಾಸ್ಸಾಗುವ ಆತುರದಲ್ಲಿದ್ದವನಿಗೆ ಪುಂಡರೀಕನ ತಂದೆ–ತಾಯಿ, ಶ್ರುತಕೇತು–ಲಕ್ಷ್ಮೀಗೆ ತಿಳಿಸಬೇಕೆಂದು ಹೇಳಿಕಳಿಸುತ್ತಾನೆ. ಮುನಿಗಳಿಗೆ ಕೆಂಡದಂತ ಕೋಪ ಬರುತ್ತದೆ. ಹೇಗೆಂದರೆ ದುರ್ವಾಸಮುನಿಗಳು ಹಾಗೂ ವಿಶ್ವಾಮಿತ್ರರಿದ್ದ ಹಾಗೆ ಮುನಿಯ ಕಪಿಂಜಲನಿಗೆ ಒಂದು ರೀತಿಯ ಅವಸರದಲ್ಲಿದ್ದೀಯ. ಕುದುರೆ ತರ ವರ್ತಿಸುತ್ತೀಯ. ಆದ್ದರಿಂದ ನೀನು ಕುದುರೆಯಾಗಿ ಹೋಗು ಎಂದು ಶಾಪಕೊಡುತ್ತಾನೆ. ಹೀಗೆ ಮೂರು ಜನರು ಶಾಪಗ್ರಸ್ಥರಾಗಿರುತ್ತಾರೆ. ಇಲ್ಲಿಗೆ ಈ ಜನ್ಮ ಮುಗಿಯುತ್ತದೆ.

ನಂತರದ ಜನ್ಮದಲ್ಲಿ ಉಜ್ಜಯಿನಿಯ ಅರಸನಾದ ತಾರಾಪೀಡನ ಮಗ ಚಂದ್ರಾಪೀಡನಾಗಿ ಚಂದ್ರನು ಜನಿಸುತ್ತಾನೆ. ಅದೇ ರೀತಿಯಾಗಿ ಮಂತ್ರಿಸುತನಾಗಿ ಪುಂಡರೀಕನಾಗಿದ್ದವನು ವೈಶಂಪಾಯನಾಗಿ ಜನ್ಮತಾಳಿ ಚಂದ್ರಾಪೀಡನ ಜೊತೆಯಾಗಿಯೇ ಬರುತ್ತಾನೆ. ಈಗ ಚಂದ್ರಪೀಡನಾಗಿ ವೈಶಂಪಾಯನರಾಗಿ ಜೊತೆಜೊತೆಗೆ ಇದ್ದಾರೆ. ಶಾಪಗ್ರಸ್ಥನಾದ ಕಪಿಂಜಲನು ಇಂದ್ರಾಯುದ ಎಂಬ ಕುದುರೆಯಾಗಿ ಚಂದ್ರಾಪೀಡನ ಜೊತೆಗೆ ಬರುತ್ತಾನೆ. ಇಲ್ಲಿ ಚಂದ್ರನ ಪತ್ನಿಯಾಗಿರುವ ರೋಹಿಣಿಯು ಚಂದ್ರಾಪೀಡನ ಸಹಾಯಕಿಯಾಗಿ ಪತ್ರಲೇಖೆಯಾಗಿ ಬರುತ್ತಾಳೆ. ಹೀಗಿರುವಾಗ ಚಂದ್ರಾಪೀಡ ದಿಗ್ವಿಜಯವನ್ನು ನಡೆಸುವುದಕ್ಕೆ ಹೊರಡುತ್ತಾನೆ. ವೈಶಂಪಾಯನ ಇಂದ್ರಾಯುದರ ಜೊತೆಯಾಗಿ ಮೂರುಲೋಕಗಳನ್ನು ಗೆದ್ದಂತೆ ಚಂದ್ರಪೀಡನು ಉತ್ತರ ದಿಕ್ಕಿಗೆ ದಿಗ್ವಿಜಯಕ್ಕೆ ಹೊರಡುತ್ತಾನೆ. ಈ ಸಂದರ್ಭವನ್ನು ನಾಗವರ್ಮನು ಜಗತ್‌ಕೌತುಕ ಎಂದು ಕರೆಯುತ್ತಾನೆ. 'ಜಗತ್ ಕೌತುಕಂ ಮುನಿದಂ ಬಿತ್ತರಿಸಿದಂ' ಎಂದು ಜಿ. ಪಿ. ರಾಜರತ್ನರವರು ಅಭಿಪ್ರಾಯಪಡುತ್ತಾರೆ. ಈ ಪ್ರಸಂಗದಿಂದ ಚಂದ್ರಾಪೀಡನಿಗೆ ವೈಶಂಪಾಯನ ಎಲ್ಲಿ ಎಂದು ಅನುಮಾನ ಮೂಡುತ್ತದೆ. ಮತ್ತೊಂದು ಕಡೆ ಸೈನ್ಯ ಹೋಗಿರುತ್ತದೆ. ಇಲ್ಲೊಂದು ಘಟನೆ

ನಡೆಯುತ್ತದೆ. ಅಚ್ಚೋದ ಸರೋವರದತ್ತಿರ ಮಹಾಶ್ವೇತೆಯನ್ನು ಅಪರಚಿತ ವ್ಯಕ್ತಿಯೋರ್ವ ಪದೇ ಪದೆ ಪೀಡಿಸುತ್ತಿರುತ್ತಾನೆ. ಅದಕ್ಕವಳು ನೀನು ಗಿಳಿಯಾಗಿ ಹೋಗೆಂದು ಶಾಪಕೊಡುತ್ತಾಳೆ. ಈ ಗಿಳಿಯೇ ಹಿಂದಿನ ಜನ್ಮದಲ್ಲಿನ ವೈಶಂಪಾಯನ. ಅಲ್ಲಿ ಚಂದ್ರಪೀಡನು ಮೂರ್ಛೆ ಹೋಗುತ್ತಾನೆ. ಇದನ್ನು ಕಂಡ ಮಹಾಶ್ವೇತೆಗೆ ತುಂಬಾ ದುಃಖವಾಗುತ್ತದೆ. ಕಾದಂಬರಿಯ ಜೊತೆಗಿದ್ದ ಪತ್ರಲೇಖೆಯು ಇಂದ್ರಾಯುದ ಕುದುರೆಯ ಮೇಲೆ ಕೂತು ಅಚ್ಚೋದ ಸರೋವರಕ್ಕೆ ದುಮುಕುತ್ತಾಳೆ. ಇಲ್ಲಿ ಇಂದ್ರಾಯುದ ಕುದುರೆಯ ಬದಲಾಗಿ ಕಪಿಂಜಲನು ಎದ್ದು ಬರುತ್ತಾನೆ. ವೈಶಂಪಾಯನ ರೂಪದಲ್ಲಿದ್ದವನೇ ಪುಂಡರೀಕನಾಗಿದ್ದಾನೆ.

ಇಲ್ಲಿ ಕಾದಂಬರಿ ನೊಂದುಕೊಂಡು ಅಗ್ನಿ ಪ್ರವೇಶಕ್ಕೆ ಹೊರಡುತ್ತಾಳೆ. ವೈಶಂಪಾಯನನು ಈ ಜನ್ಮ ಕಳೆದು ಗಿಳಿಯಾಗಿ ಹುಟ್ಟಿದ್ದಾನೆ. ಇದೇ ಚಂದ್ರಾಪೀಡನು ಮುಂದಿನ ಜನ್ಮದಲ್ಲಿ ಶೂದ್ರಕನಾಗಿ ಹುಟ್ಟಿಬರುತ್ತಾನೆ. ಈ ವಿಚಾರವನ್ನು ಕಪಿಂಜಲನು ಪುಂಡರೀಕನ ತಾಯಿಯಾದ ಲಕ್ಷ್ಮೀಯ ಬಳಿ ಹೇಳುತ್ತಾನೆ. ಗಿಳಿಯನ್ನು ರಕ್ಷಣೆ ಮಾಡಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಮತ್ತೆ ಪುಂಡರೀಕ ಬರುತ್ತಾನೆ. ತಾಯಿ ಚಂಡಾಲಕನ್ಯೆಯು ವೇಶವನ್ನು ಧರಿಸಿಕೊಂಡು ಶೂದ್ರಕನ ಆಸ್ಥಾನಕ್ಕೆ ತೆರಳುತ್ತಾಳೆ. ಗಿಳಿಯ ವಿಶೇಷತೆಯನ್ನು ಹೇಳಿ ಅವರಿಗೆ ಕೊಡುತ್ತಾಳೆ. ಅವಳ ಉದ್ದೇಶವೇನೆಂದರೆ ಅವರಿಬ್ಬರೂ ಈ ಮೂರು ಜನ್ಮಗಳಾದ ಮೇಲೆ ಅವರನ್ನು ಪಡೆದುಕೊಳ್ಳುವ ಉದ್ದೇಶವಿರುತ್ತದೆ. ಇಂತಹ ಜೀವನದ ವೃತ್ತಾಂತಗಳನ್ನು ಗಿಳಿ ಶೂದ್ರಕನಿಗೆ ಹೇಳುತ್ತಿರುತ್ತದೆ. ಹೀಗೆ ಪ್ರತಿಯೊಂದು ಘಟನೆಗಳ ವಿಷಯವನ್ನು ಜಾಬಾಲಿ ಋಷಿ ಮುನಿಗಳು ನನಗೇಳಿದ್ದರೆಂದು ಗಿಳಿ ಹೇಳುತ್ತದೆ. ಆಗ ಇಷ್ಟು ದೀರ್ಘವಾದ ಕಥೆ ಇದರಲ್ಲಿ ಇದೆಯಲ್ಲ ಎಂದು ಭಾವಿಸಿ ಶೂದ್ರಕನು ತನ್ನ ಸ್ಥಾನಗಳಿಗೆ ಹೋಗಿ ಅಲಂಕರಿಸಬೇಕು ತಮಗೋಸ್ಕರ ಮಹಾಶ್ವೇತೆ ಮತ್ತು ಕಾದಂಬ–ರಿಯರು ಕಾಯುತ್ತಿದ್ದಾರೆಂದು ತಿಳಿದು ಶೂದ್ರಕ ಮತ್ತು ಗಿಳಿ ಇಬ್ಬರೂ ಕೂಡ ಸ್ವ ಇಚ್ಚೆಯಿಂದಲೂ ದೇಹವನ್ನು ತ್ಯಜಿಸಿಬಿಡುತ್ತಾರೆ. ಇದರಿಂದ ಪುನರ್ಮಿಲನದ ಕಥೆಯನ್ನು ಕಾವ್ಯದಲ್ಲಿ ಕಾಣಬಹುದು.

**ಮಹಾಶ್ವೇತೆ ಹೇಳಿದ ಕಥೆ:** ತಾನು ಹಂಸ ಮತ್ತು ಗೌರಿ ಎಂಬ ಹೆಸ–ರಿನ ಅಪ್ಸರ ದಂಪತಿಯ ಮಗಳು. ಅವರಿಬ್ಬರೂ ಸಂತಾನವಿಲ್ಲದೆ ಬಹುಕಾಲ ಪರಿತಪಿಸುತ್ತಿರುತ್ತಾರೆ. ನಂತರದಲ್ಲಿ ಮಹಾಶ್ವೇತೆ ಜನಿಸುತ್ತಾಳೆ. ನನಗೆ ಯೌವನವಾಯಿತು. ಒಮ್ಮೆ ತಾಯಿಯೊಡನೆ ಸ್ನಾನ ಮಾಡಿ ಬರಲು ಅಚ್ಚೋದ ಸರೋವರಕ್ಕೆ ಬಂದವಳಾಗಿದ್ದೆ, ದಾರಿಯಲ್ಲೊಬ್ಬ ಮುನಿಕುಮಾರನನ್ನು ನೋಡಿದಾಕ್ಷಣವೇ ಮೋಹ ಪರವಶಳಾಗಿಬಿಟ್ಟೆ. ಅವನಿಗೆ ನಮಸ್ಕಾರ ಮಾಡುವ

ನೆಪದಲ್ಲಿ ಅವನ ಪಾದಗಳನ್ನು ಮುಟ್ಟಿ ಕಣ್ಣೊತ್ತಿಕೊಂಡಳು ಹೊರಗೆ ನಮಸ್ಕಾರ, ಒಳಗೆ ಕಾಮವಿಕಾರ! ಈ ಸನ್ನಿವೇಶದಿಂದಾಗಿ ಅವನಿಗೂ ಅವಳ ಬಗ್ಗೆ ಅನುರಾಗ ಉಂಟಾಗುತ್ತದೆ. ಪಕ್ಕದಲ್ಲೆ ಇದ್ದ ಅವನ ಗೆಳೆಯನಾದ ಕಪಿಂಜಲನನ್ನು ವಿಚಾ–ರಿಸಿದಾಗ ಅವನು ಶ್ವೇತಕೇತುವಿನ ಮಗ ಪುಂಡರೀಕನೆಂಬ ವಿಷಯ ತಿಳಿಯಿತು. ಮಾತನಾಡುವ ನೆಪದಿಂದ ಅವನ ಕಿವಿಯಲ್ಲಿದ್ದ ಸುಂದರವಾದ ಕುಸುಮ ಮ–ಂಜರಿಯ ವಿಷಯ ಕೇಳಿದಾಗ ಪುಂಡರೀಕ ಅದನ್ನು ತೆಗೆದು ಅವಳ ಕಿವಿಗೆ ತೊಡಿಸಲು ಹೋಗುತ್ತಾನೆ. ಕನ್ಯೆಯ ಕೆನ್ನೆಯ ಸ್ಪರ್ಶದಿಂದ ಅವನ ಕೈ ನಡುಗಿ ಕೈಯಲ್ಲಿದ್ದ ಜಪದ ಸರ ಜಾರಿ ಬೀಳುತ್ತದೆ. ಅದನ್ನೆ ತಾನೆತ್ತಿಕೊಂಡು ಕೊರಳಲ್ಲಿ ಧರಿಸಿ ಮಹಾಶ್ವೇತೆಯು ಸುಖ ಪಡುತ್ತಿರುತ್ತಾಳೆ. ಇದನ್ನು ಗಮನಿಸಿದ ಕಪಿಂಜಲನು ಮುನಿಕುಮಾರನು ಕೋಪಗೊಂಡಿದ್ದಾನೆ. ಈ ಜಪ ಸರವನ್ನು ವಾಪಸು ಕೊಡು ಎಂದು ಕೇಳಿಕೊಳ್ಳುತ್ತಾನೆ. ಗಾಬರಿಗೊಂಡ ಮಹಾಶ್ವೇತೆಯು ಜಪ ಸರಕ್ಕೆ ಬದಲಾಗಿ ತಾನು ಹಾಕಿಕೊಂಡಿದ್ದ ಮತ್ತೊಂದು ಸರವನ್ನು ಕೊಡುತ್ತಾಳೆ. ಅನ್ಯ ಚಿತ್ತನಾಗಿದ್ದ ಪುಂಡರೀಕನು ಅದನ್ನೆ ಜಪಸರವೆಂದು ಭಾವಿಸಿಕೊಂಡು ತೆಗೆದುಕೊಂಡು ಹೋಗುತ್ತಾನೆ.

ಒಟ್ಟಾರೆಯಾಗಿ ಕಾದಂಬರಿಯಲ್ಲಿ ಬರುವ ತಾತ್ಪರ್ಯವೇನೆಂದರೆ ಮೊದಲ ಜನ್ಮದಲ್ಲಿ ಪುಂಡರೀಕನಾಗಿದ್ದವನು, ಚಂದ್ರನ ಶಾಪಕ್ಕೆ ಒಳಗಾಗಿ ವೈಶಂಪಾಯನ ಎಂಬ ಒಬ್ಬ ಮಂತ್ರಿಯ ಮಗನಾಗಿ ಜನಿಸುತ್ತಾನೆ. ಆ ನಂತರ ಜನ್ಮದಲ್ಲಿ ಆತ ಮಹಾಶ್ವೇತೆಯ ಶಾಪಕ್ಕೊಳಗಾಗಿ ಗಿಳಿಯಾಗಿ ಜನ್ಮ ತಾಳುತ್ತಾನೆ. ಹಾಗೆಯೇ ಚಂದ್ರನು ಸಹ ತನ್ನ ಎರಡನೆಯ ಜನ್ಮದಲ್ಲಿ ಪುಂಡರೀಕನಿಂದ ಶಾಪಗ್ರಸ್ಥನಾಗಿ ಚಂದ್ರಾಪೀಡನಾಗಿ ಹುಟ್ಟುತ್ತಾನೆ. ತದನಂತರ ಜನ್ಮದಲ್ಲಿ ಶೂದ್ರಕನಾಗಿ ಜನ್ಮ ತಾಳುತ್ತಾನೆ. ಅದೇ ರೀತಿ ಇವರ ಜೊತೆಗೆ ಎರಡು ಪಾತ್ರಗಳ ಜನ್ಮಾಂತರಗಳನ್ನು ನಾವು ಕಾಣಬಹುದು. ಇನ್ನೊಂದು ಕಪಿಂಜಲ ಪುಂಡರೀಕನ ಜೊತೆಗೆ ಸದಾ ಕಾಲ ಇರುವಂತವನು, ಎರಡನೆಯ ಜನ್ಮದಲ್ಲಿ ಇಂದ್ರಾಯುದ ಎಂಬ ಕುದುರೆಯಾಗಿ ಜನಿಸುತ್ತಾನೆ. ಜೊತೆಗೆ ಚಂದ್ರನ ಪತ್ನಿಯಾದ ರೋಹಿಣಿ ಮತ್ತೊಂದು ಜನ್ಮದಲ್ಲಿ ಪತ್ರಲೇಖೆಯಾಗಿ ಚಂದ್ರಾಪೀಡನ ಸಹಾಯಕಿಯಾಗಿ ಬರುತ್ತಾಳೆ. ಇವೆಲ್ಲವೂ ಕರ್ನಾಟಕ ಕಾದಂಬರಿಯಲ್ಲಿ ಬರುವ ಜನ್ಮಾಂತರಗಳಾಗಿವೆ. ಆದರೆ ಇಲ್ಲಿ ಗಮನಿಸಬೇಕಾದದ್ದೇನೆಂದರೆ ಮಹಾಶ್ವೇತೆ ಮಾತ್ರ ಇಡೀ ಕಾವ್ಯದಲ್ಲಿ ಎಲ್ಲಿಯೂ ಸಹ ಬದಲಾಗಿರುವುದಿಲ್ಲ. ಎರಡನೆಯ ಜನ್ಮದಿಂದ ಕಾದಂಬರಿಯ ಪಾತ್ರ ಮಾತ್ರ ಕಾಣಿಸಿಕೊಳ್ಳುತ್ತದೆ. ಈ ಪಾತ್ರವು ಕೂಡ ಕಾವ್ಯದಲ್ಲಿ ಬದಲಾಗಿರುವುದಿಲ್ಲ. ಇನ್ನೊಂದು ವಿಶೇಷವೆಂದರೆ ಇವರೆಲ್ಲರೂ ಮೂರು ಮೂರು ಜನ್ಮಗಳನ್ನೆತ್ತಿಕೊಂಡು

ಬಂದರು ಮಹಾಶ್ವೇತೆ ಮತ್ತು ಕಾದಂಬರಿಯರು ಚಿರ ಯೌವ್ವನ ಸ್ಥಿತಿಯಲ್ಲಿದ್ದಾರೆ. ಇದೂ ಈ ಕಾದಂಬರಿ ಕಾವ್ಯತ್ವದ ಧೋರಣೆ ಮತ್ತು ವಿಶೇಷತೆ. ಇದರಲ್ಲಿ ಸ್ನೇಹದ ಎಳೆಗಳಿವೆ, ಪ್ರೇಮದ ಕಥೆಗಳಿವೆ, ಬಾಂಧವ್ಯದ ಸಹಾಯಕಿಯಾಗಿ ಬಂದಿದ್ದರೂ ಕೂಡ ಪತ್ರಲೇಖೆಯ ನಿಷ್ಠೇ ಇದೆ. ಲಕ್ಷ್ಮೀ ತನ್ನ ತಾಯ್ತನವನ್ನು ಚಂಡಾಲಕನ್ಯೆಯಾಗಿ ಹೋಗಿ ಗಿಳಿಯನ್ನು ಉಳಿಸಿಕೊಳ್ಳುವ ರೀತಿ ಇದೆಲ್ಲವನ್ನು ಓದುಗರಿಗೆ ಹೊಸ ಆಲೋಚನೆ ಮತ್ತು ಆನಂದವನ್ನು ಈ ಕೃತಿ ಕೊಡುತ್ತದೆಂಬ ಭರವಸೆಯ ಹಿನ್ನೆಲೆಯಲ್ಲಿ ಅವಲೋಕಿಸಿದ್ದೇನೆ.

**ಪರಾಮರ್ಶನ ಗ್ರಂಥಗಳು:**


1. ವೀ. ಸೀತಾರಾಮಯ್ಯ (ಸಂ), ಒಂದನೆಯ ನಾಗವರ್ಮ (1973), ಐ.ಬಿ.ಹೆಚ್ ಪ್ರಕಾಶನ, ಬೆಂಗಳೂರು.
2. ಸಿ.ಪಿ.ಕೆ. (ಸಂ), ನಾಗವರ್ಮನ ಕರ್ನಾಟಕ ಕಾದಂಬರಿ (2002), ಚೇತನ್‌ಬುಕ್‌ಹೌಸ್, ಮೈಸೂರು.
3. ರಂ.ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ (1993), ಗೀತಾ ಬುಕ್‌ಹೌಸ್, ಮೈಸೂರು.
4. ಪ್ರಥಮ ಬಿ.ಎ. ಐಚ್ಛಿಕ ಕನ್ನಡ ಪಠ್ಯ ಪುಸ್ತಕ (1992), ಕ.ರಾ.ಮು.ವಿ.ವಿ., ಮೈಸೂರು.
5. ವೀ. ಸೀತಾರಾಮಯ್ಯ, ಕರ್ನಾಟಕ ಕಾದಂಬರಿ (1964), ಪ್ರಸಾರಂಗ, ಮೈ. ವಿ. ವಿ. ಮೈಸೂರು.